**ದಿವಾಣಿ ನ್ಯಾಯಾಲಯ ಮತ್ತು ಜೆ. ಎಮ್. ಎಫ್. ಸಿ. ನ್ಯಾಯಾಲಯ, ಜೇವರ್ಗಿ**

**ಸಿಸಿ ನಂ.36/2021**

**ಚಾಸಾ-1/ಪಿಡಬ್ಲೂ-5**

| | |
|---|---|
| **ಹೆಸರು** | ನಿಂಗನಗೌಡ ಪಾಟೀಲ |
| **ತಂದೆ ಹೆಸರು** | ತಮ್ಮನಗೌಡ |
| **ವಯಸ್ಸು** | 36 ವರ್ಷಗಳು |
| **ಉದ್ಯೋಗ** | ಅಬಕಾರಿ ನಿರೀಕ್ಷಕರು |
| **ವಾಸ ಸ್ಥಳ** | ಕಲಬುರಗಿ |

**ಸಾಕ್ಷಿಯನ್ನು ದಿನಾಂಕ 11.11.2025 ರಂದು ಸಾಕ್ಷಿಯನ್ನ ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.**

**ಮುಖ್ಯ ವಿಚಾರಣೆ: ಸಹಾಯಕ ಸರ್ಕಾರಿ ಅಭಿಯೋಜಕರಿಂದ.**

ದಿನಾಂಕ 04.01.2017 ರಿಂದ 25.11.2020 ರವರೆಗೆ ಅಬಕಾರಿ ಉಪ ನಿರಿಕ್ಷಕನಾಗಿ ಜೇವರ್ಗಿಯಲ್ಲಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿನಾಂಕ 18-04-2020 ರಂದು ಬೆಳಗಿನ ಜಾವ 3.00 ಗಂಟೆಗೆ ಜೇವರ್ಗಿ ಪಟ್ಟಣದಲ್ಲಿ ಗಸ್ತು ಮಾಡಿ ಮನೆಗೆ ತರಳುತ್ತಿರುವಾಗ ನನ್ನ ಮೊಬೈಲಗೆ ಕರೆ ಬಂದಿದ್ದೇನೆಂದರೆ ಸೊನ್ನ ಗ್ರಾಮದ ಹೈವೆ ಮೇಲೆ ಜುಮ್ಮಣ್ಣ ತಂದೆ ಧ್ಯಾವಪ್ಪ ಪೂಜಾರಿ ಸಾ. ಸಾಥಖೇಡ ಎನ್ನುವ ವ್ಯಕ್ತಿ ನಾಲ್ಕು ಚಕ್ರ ವಾಹನದ ಮೇಲೆ ಅಕ್ರಮವಾಗಿ ಮದ್ಯ ಸಾಗಾಟ ಮಾಡುತ್ತಿದ್ದ ಬಗ್ಗೆ ಖಚಿತ ಬಾತ್ಮಿ ಮೇರೆಗೆ ಚಾಸಾ-2 ಮತ್ತು 3 ರವರಿಗೆ ವಿಷಯ ತಿಳಿಸಿ ದಾಳಿಯ ಸಮಯದಲ್ಲಿ ಅಬಕಾರಿ ಅಕ್ರಮ ಕಂಡು ಬಂದಲ್ಲಿ ಬೆಳಗಿನ ಜಾವ ಇರುವುದರಿಂದ ಪಂಚರು ಸಿಗದೇ ಇದ್ದಲ್ಲಿ ಚಾಸಾ-2 ಮತ್ತು 3 ರವರನ್ನು ಪಂಚರಾಗಬೇಕೆಂದು ತಿಳಿಸಿರುತ್ತೇನೆ. ನಂತರ ಬೆಳಗಿನ ಜಾವ 3.20 ಗಂಟೆಗೆ ಜವಳಗಾ ಕ್ರಾಸ ಹತ್ತಿರ ರಸ್ತೆಯ ಗಸ್ತು ಮಾಡುತ್ತಿದ್ದಾಗ ಒಂದು ನಾಲ್ಕು ಚಕ್ರದ ವಾಹನ ಸೊನ್ನ ಕಡೆಯಿಂದ ಬರುತ್ತಿತ್ತು. ಆಗ ನಾವು ಹಾಗೂ ಸಿಬ್ಬಂದಿಗಳು ವಾಹನವನ್ನು ತಡೆಯಲು ಸೂಚಿಸಿದಾಗ ಆಗ ನಾವು ಟಾರ್ಚ ಸಹಾಯದಿಂದ ವಾಹನವನ್ನು ನಿಲ್ಲಿಸಲು ಸೂಚಿಸಿದಾಗ ಸದರಿ ಚಾಲಕನು ನಮ್ಮನ್ನು ಸಮವಸ್ತ್ರದಲ್ಲಿ ನೋಡಿ ವಾಹನವನ್ನು ವೇಗವಾಗಿ ಚಲಾಯಿಸಿಕೊಂಡು ಹೋದನು. ನಂತರ ನಾವು ನಮ್ಮ ವಾಹನದಲ್ಲಿ ಬೆನ್ನತ್ತಿ ಹೋದಾಗ ಸದರಿ ಚಾಲಕನು ಸ್ವಲ್ಪ ದೂರ ಹೋಗಿ ತನ್ನ ವಾಹನವನ್ನು ಬಿಟ್ಟು ಇಳಿದು ಓಡಿ ಹೋದನು. ಸದರಿ ವ್ಯಕ್ತಿಯನ್ನು ನಾನು ಹಾಗೂ ಸಿಬ್ಬಂದಿಗಳು ಹಿಡಿಯಲು ಪ್ರಯತ್ನಿಸಿದರೂ ಸಹ ಆತನು ಕತ್ತಲಲ್ಲಿ ಓಡಿ ಹೋಗಿರುತ್ತಾನೆ. ನ್ಯಾಯಾಲಯದಿಂದ ಶೋಧನಾ ತರಲು ಸಮಯದ ಅಭಾವಿರುವುದರಿಂದ ಮತ್ತು ಆರೋಪಿತನು ಸಾಕ್ಷ್ಯಗಳನ್ನು ಬೇರೆ ಸಾಗಿಸುವ ಸಂಭವವಿರುವುದರಿಂದ ನಾನು ನನಗೆ ಇರುವ ಕಲಂ.54 ರಡಿಯಲ್ಲಿ ಅಧಿಕಾರ ಬಳಸಿಕೊಂಡು ಸ್ಥಳದಲ್ಲೇ ಸರ್ಚ ವಾರಂಟನ್ನು ತಯಾರಿಸಿ ಸದರಿ ವಾಹನವನ್ನು ಪರಿಶೀಲಿಸಲಾಗಿ, ಅದು ಬೂದು ಬಣ್ಣದ ತೂಪಾನ ಕ್ರೂಷರ ನಂ.ಕೆಎ-35/ಎ-8953 ಆಗಿತ್ತು. ಸದರಿ ವಾಹನವನ್ನು ಪರಿಶೀಲಿಸಲಾಗಿ ಅದರಲ್ಲಿ 27 ರಟ್ಟಿನ ಪೆಟ್ಟಿಗೆಗಳಿದ್ದವು. ಅವುಗಳನ್ನು

ಪರಿಶೀಲಿಸಲಾಗಿ 180 ಎಂಎಲ್ ನ 17 ಓರಿಜನಲ್ ಚಾಯ್ಸ ವಿಸ್ಕಿಯ ಬಾಕ್ಸಗಳಲ್ಲಿ 816 ಪೌಚಗಳು ಇದ್ದವು. 180 ಎಂಎಲ್ ನ 10 ಬ್ಯಾಗ ಪೈಪರ ವಿಸ್ಕಿಯ ಬಾಕ್ಸಗಳಲ್ಲಿ 480 ಪೌಚಗಳು ಇದ್ದವು. ವಾಹನವನ್ನು ಮುಂದುವರೆದು ಪರಿಶೀಲಿಸಲಾಗಿ ಅದರ ಡ್ಯಾಶ್ ಬೋರ್ಡ ಬಾಕ್ಸನಲ್ಲಿ ಆಧಾರ ಕಾರ್ಡ ಮತ್ತು ಆರ್ ಸಿ ಕಾರ್ಡ ಇತ್ತು. ನಂತರ ಸದರಿ ಮುದ್ದೇಮಾಲು ಮತ್ತು ವಾಹನವನ್ನು ಜಪ್ತಿಪಡಿಸಿಕೊಂಡು ಸ್ಥಳದಲ್ಲಿ FSL ಗಾಗಿ ಪ್ರತಿಯೊಂದು ಬಾಕ್ಸ ನಿಂದ ತಲಾ ಎರಡೆರಡು ಬಾಟಲಿಗಳಂತೆ ಒಟ್ಟು ಓರಿಜನಲ್ ಚಾಯ್ಸನ 34 ಪೌಚಗಳು ಹಾಗೂ ಬ್ಯಾಗ ಪೈಪರನ ಪ್ರತಿ ರಟ್ಟಿನ ಬಾಕ್ಸನಿಂದ ತಲಾ ಎರಡರಂತೆ 20 ಪೌಚಗಳನ್ನು ತೆಗೆದುಕೊಳ್ಳಲಾಯಿತು. ಸದರಿ ಸ್ಯಾಂಪಲ್ ಪೌಚಗಳನ್ನು ಚೀಟಿಯನ್ನು ಅಂಟಿಸಿ ಇಲಾಖೆ ಮುದ್ರೆ ನಂ.630 ರಿಂದ ಶೀಲ್ ಮಾಡಿ ಸ್ಥಳದಲ್ಲೆ ಮಾದರಿ ಮುದ್ರೆ ಪತ್ರವನ್ನು ತಯಾರಿಸಿ ಮತ್ತು ಶಾಂಪಲ್ ಚೀಟಿಯನ್ನು ಅಂಟಿಸಲಾಯಿತು. ಪಂಚನಾಮೆಯನ್ನು ಬೆಳಗಿನ ಜಾವ 03-45 ರಿಂದ 05-00 ಗಂಟೆಯವರೆಗೆ ಜರುಗಿಸಲಾಯಿತು. ನಂತರ ಮುದ್ದೇಮಾಲು ಹಾಗೂ ಪಂಚನಾಮೆಯೊಂದಿಗೆ ಕಚೇರಿಗೆ ಬಂದು ಸರಕಾರ ತರ್ಪೆ

ನಂತರ ಮುಂಜಾನೆ 5.25 ಕ್ಕೆ ಠಾಣೆಗೆ ಬಂದು ಪ್ರ.ವ.ವ. ಮತ್ತು ಸರಕಾರಿ ತರ್ಪೆ ಫಿರ್ಯಾದಿಯನ್ನು ಮಾನ್ಯ ನ್ಯಾಯಲಯಕ್ಕೆ ಸಲ್ಲಿಸಲಾಯಿತು. ಪ್ರಕರಣದ ಮುಂದಿನ ತನಿಖೆಯನ್ನು ಚಾಸಾ-7 ರವರಿಗೆ ಹಸ್ತಾಂತರಿಸಿರುತ್ತೇನೆ.

ಈಗ ಶೋಧನಾ ವರದಿಯನ್ನು ನೋಡುತ್ತಿದ್ದು ಅದರಲ್ಲಿ ನನ್ನ ಸಹಿ ಇರುತ್ತದೆ. ಅದನ್ನು ನಿಪಿ-10 ಎಂದು, ಸಾಕ್ಷಿಯ ಸಹಿಯನ್ನು ನಿಪಿ-10(ಎ) ಎಂದು ಗುರುತಿಸಲಾಯಿತು. ಈಗ ನಾನು ಪಂಚನಾಮೆಯನ್ನು ನೋಡುತ್ತಿದ್ದು ಅದರಲ್ಲಿ ನನ್ನ ಸಹಿ ಇರುತ್ತದೆ. ಪಂಚನಾಮೆಯನ್ನು ಈಗಾಗಲೇ ನಿಪಿ-1 ಎಂದು ಗುರುತಿಸಲಾಗಿದ್ದು ಸಾಕ್ಷಿಯ ಸಹಿಯನ್ನು ನಿಪಿ-1(ಬಿ) ಎಂದು ಗುರುತಿಸಲಾಯಿತು. ಸಾಕ್ಷಿ ಫಿರ್ಯಾದಿಯನ್ನು ನೋಡಿ ಗುರುತಿಸಿದನ್ನು ಅದನ್ನು ನಿಪಿ-11 ಎಂದು, ಸಾಕ್ಷಿಯ ಸಹಿಯನ್ನು ನಿಪಿ-11(ಎ) ಎಂದು ಗುರುತಿಸಲಾಯಿತು. ಪ್ರ.ವ.ವ. ನ್ನು ಸಾಕ್ಷಿ ನೋಡಿ ಗುರುತಿಸಿದನ್ನು ಅದನ್ನು ನಿಪಿ-12 ಎಂದು, ಸಾಕ್ಷಿಯ ಸಹಿಯನ್ನು ನಿಪಿ-12(ಎ) ಎಂದು ಗುರುತಿಸಲಾಯಿತು. ಸಾಕ್ಷಿ ಮಾದರಿ ಮುದ್ರೆ ಪತ್ರವನ್ನು ನೋಡಿ ಗುರುತಿಸಿದನ್ನು ಅದನ್ನು ನಿಪಿ-13 ಎಂದು, ಸಾಕ್ಷಿಯ ಸಹಿಯನ್ನು ನಿಪಿ-13(ಎ) ಎಂದು ಗುರುತಿಸಲಾಯಿತು. ಸಾಕ್ಷಿ ಮುದ್ದೆ ಮಾಲುಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ಈಗಾಗಲೇ ಎಂ.ಓ-1 ಎಂದು ಗುರುತಿಸಲಾಗಿದೆ.

<u>ಪಾಟೀ ಸವಾಲುಃ ಆರೋಪಿ ಪರ ವಕೀಲರು ಪಾಟಿ ಸವಾಲಿಗೆ ಕಾಲಾವಕಾಶ ಕೋರಿದ್ದು ಯಾವುದೆ ಸಕಾರಣವಿಲ್ಲದ ಕಾರಣ ಪಾಟಿ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.</u>

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)
ಓ.ಹೇ.ಕೆ.ಸರಿ.ಇದೆ.

ಪ್ರ.ದ.ನ್ಯಾಯಿಕ ದಂಡಾಧಿಕಾರಿಗಳು
ಜೇವರ್ಗಿ